Preliminary Decree For Partition & Separate Possession

ದಾವಾ ದಾಖಲ ದಿನಾಂಕ: 14-01-2016

ದಾವಾ ನಿಖಾಲಿ ದಿನಾಂಕ: 03-07-2018

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1ನೆ ಹೆಚ್ಚುವರಿ ಜೆ.ಎಂ.ಎಫ್.ಸಿ
ನ್ಯಾಯಾಲಯ, ರಾಣೇಬೆನ್ನೂರ

ಅಸಲು ದಾವಾ ಸಂಖ್ಯೆ: 32/2016

ವಾದಿ 1. ಶ್ರೀಮತಿ ಶೋಭಾ ಕೋಂ. ಗುಡ್ಡಪ್ಪ ಕಾಳಿ
ವಯಾ: 35 ವರ್ಷ, ಉ: ಮನೆಕೆಲಸ ಹಾಗೂ ಶೇತ್ಕರಿ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

ವಿರುದ್ಧ

ಪ್ರತಿವಾದಿಯರು 1. ಶ್ರೀಮತಿ ಗೌರಮ್ಮ ಕೋಂ. ಹಾಲಪ್ಪ ಕಾಳಿ
ವಯಾ: 90 ವರ್ಷ, ಉ: ಮನೆಕೆಲಸ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

2. ಶ್ರೀ ಕರಬಸಪ್ಪ ತಂದೆ ಹಾಲಪ್ಪ ಕಾಳಿ
ವಯಾ: 35 ವರ್ಷ, ಉ: ಶೇತ್ಕರಿ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

3. ಶ್ರೀ ನೀಲಪ್ಪ ತಂದೆ ಹಾಲಪ್ಪ ಕಾಳಿ
ವಯಾ: 55 ವರ್ಷ, ಉ: ಶೇತ್ಕರಿ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

4. ಶ್ರೀ ಶಿವಪ್ಪ ತಂದೆ ಸುದಾಹನುಮಪ್ಪ.ಪೂಜಾರ
ವಯಾ: 65 ವರ್ಷ, ಉ: ಶೇತ್ಕರಿ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

5. ಶ್ರೀಮತಿ ಮಂಜುಳಾ. ಸುಳ್ಳು ಆಧರಿಸುವ ಗಂಡ ಗುಡಪ್ಪ. ಕಾಳಿ.
ಆದರೆ ನಿಜವಾದ ಹೆಸರು ಮಂಜುಳಾ ಕೋಂ ಕಂಠಿ
ವಯಾ: 45 ವರ್ಷ, ಉ: ಮನೆಕೆಲಸ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

6. ಕುಮಾರಿ ಪ್ರಿಯಾಂಕಾ ಸುಳ್ಳು ಆಧರಿಸುವ ತಂದೆ ಗುಡಪ್ಪ. ಕಾಳಿ.
ಆದರೆ ನಿಜವಾದ ಹೆಸರು ಪ್ರಿಯಾಂಕಾ ಕಂಠಿ
ವಯಾ: 25 ವರ್ಷ, ಉ: ಮನೆಕೆಲಸ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

7. ಸಚಿನ್ ಸುಳ್ಳು ಆಧರಿಸುವ ತಂದೆ ಗುಡಪ್ಪ. ಕಾಳಿ.
ಆದರೆ ನಿಜವಾದ ಹೆಸರು ಸಚಿನ್ ತಂದೆ ಕಂಠಿ
ವಯಾ: 19 ವರ್ಷ, ಉ: ಏನೂ ಇಲ್ಲ
ಸಾ॥ ಬೇಲೂರ ತಾ॥ ರಾಣೇಬೆನ್ನೂರ ಜಿ॥ ಹಾವೇರಿ

ವಾದಿಯರ ವಿನಂತಿ

ಎ) ಮಾನ್ಯ ನ್ಯಾಯಾಲಯದವರು ನ್ಯಾಯತಾದೃಷ್ಟಿಯಿಂದ ವಾದಿಗೆ ಯಾವತ್ತೂ ದಾವಾದಾಸ್ತಿಗಳಲ್ಲಿ ಕಾಯ್ದೇಶಿರ ಸಲ್ಲತಕ್ಕ ತಲಾ 1/4 ಹಿಸ್ಸೆಯನ್ನು ಸರಸ-ನಿರಸ ವಿಂಗಡಿಸಿ ಪ್ರತ್ಯಕ್ಷ ಕಬ್ಜಾ ಕೊಡಿಸಬೇಕು

ಬಿ) ಮಾನ್ಯ ನ್ಯಾಯಾಲಯದವರು ನ್ಯಾಯತಾ ದೃಷ್ಟಿಯಿಂದ ವಾದಿಗೆ ಯಾವತ್ತೂ ದಾವಾದ ಆಸ್ತಿಗಳಲ್ಲಿ ಕಾಯ್ದೇಶಿರ ಸಲ್ಲತಕ್ಕ ತಲಾ 1/4 ಹಿಸ್ಸೆಯನ್ನು ಸರಸ-ನಿರಸ ವಿಂಗಡಿಸಿ ಹದ್ ಬಂದೋಬಸ್ತ ಮಾಡಿ ಅಳತೆ ಮಾಡಿ ವಾದಿಯರ ಪ್ರತ್ಯಕ್ಷ ಕಬ್ಜಾ ಕೊಡಿಸಲು ಒಬ್ಬ ತಾಲೂಕ ಸರ್ವೇಯರನ್ನು ನೇಮಿಸಬೇಕು. ಸದರಿ ತಾಲೂಕ ಸರ್ವೇಯರ ಫೀ ಭತ್ಯೆ ವಗೈರೆ ತುಂಬಲು ಈ ವಾದಿಯು ತಯಾರು ಬದ್ದ ಇರುತ್ತಾರೆ.

ದಾವಾದ ಆಕಾರ

ಯಾವತ್ತೂ ದಾವಾದಾಸ್ತಿಗಳಲ್ಲಿ ವಾದಿಗೆ ಕಾಯ್ದೇಶಿರ ಸಲ್ಲತಕ್ಕ 1/4 ಹಿಸ್ಸೆಯನ್ನು ಸರಸ-ನಿರಸ ವಿಂಗಡಿಸಿ ಪ್ರತ್ಯಕ್ಷ ಕಬ್ಜಾ ಕೊಡಿಸುವ ಕುರಿತು ಪ್ರತಿವಾದಿಯರ ಮೇಲೆ ಮೇಲ್ಕಂಡ ದಾವೆಯನ್ನು ಮಾಡಿದ್ದರಿಂದ ಸದರ ದಾವೆಯನ್ನು ಕೋರ್ಟ ಫೀ ಸಲುವಾಗಿ ದಾವಾಸ್ತಿಗಳ ಹಪ್ತೇದ ಮೇರೆಗೆ ಕೋರ್ಟ ಫೀ ಭರಾಯಿಸಿದ್ದು ದಾವಾಸ್ತಿಗಳ ಒಟ್ಟು ಹಪ್ತೇ 25/- ರೂ.98/ಪೈ ಆಗುತ್ತಿದ್ದು ಅದರ 12 1/2 ಪಟ್ಟು 325/- ರೂ. ಆಗುತ್ತಿದ್ದು ಅದರಲ್ಲಿ ವಾದಿಯ 1\4 ಕಿಮ್ಮತ್ತು 82/-ರೂ ಆಗುತ್ತಿದ್ದು ಅದರ ಮೇಲೆ ವಾದಿಯು ತಮ್ಮ ಮಾನ್ಯ ಕೋರ್ಟಿಗೆ K.C.F and S.V.Act 1958 ಕಲಂ.35(2) ನೇದ್ದರ ಮೇರೆಗೆ ಅತ್ಯಂತ ಹೆಚ್ಚಿನ ಕೋರ್ಟ ಫೀಯನ್ನು ಭರಾಯಿಸಿದ್ದಿರುತ್ತದೆ. ಕೋರ್ಟಿನ ಅಧಿಕಾರದ ಬಗ್ಗೆ ಹಾಗೂ ವಕೀಲರ ಫೀ ಬಗ್ಗೆ ದಾವಾಸ್ತಿಗಳ ಮಾರುಕಟ್ಟೆ ಕಿಮ್ಮತ್ತನ್ನು 8,000,00/- (ಎಂಟು ಲಕ್ಷ ರೂ) ಆಕಾರ ಮಾಡಿದ್ದು ಅದರಲ್ಲಿ ವಾದಿಯ ¼ ಹಿಸ್ಸಾದ ಕಿಮ್ಮತ್ತು 2,00,000/ (ಎರಡು ಲಕ್ಷ ರೂ) ಆಗುತ್ತಿದ್ದು. ತಮ್ಮ ಮಾನ್ಯ ಕೋರ್ಟಿಗೆ ಮೇಲ್ಕಂಡ ದಾವೆಯನ್ನು ಸಂಪೂರ್ಣವಾಗಿ ಚೌಕಾಸಿ ಮಾಡಿ ನಿರ್ಣಯಿಸಲಿಕ್ಕೆ ಅವಕಾಶ ಇರುತ್ತದೆ.

ಈ ದಾವೆಯು ದಿನಾಂಕ: 03 ನೇ ಜುಲೈ 2018 ರಂದು ಅಂತಿಮ ತೀರ್ಮಾನಕ್ಕೆಂದು ಮಾನ್ಯ ನ್ಯಾಯಾಲಯದ ಮುಂದೆ ಬಂದಾಗ, ಶ್ರೀ ಪಿ.ಶಿವರಾಜ್, ಬಿ.ಕಾಂ.ಎಲ್.ಎಲ್.ಬಿ, ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1ನೆ ಹೆಚ್ಚುವರಿ ಜೆ.ಎಂ.ಎಫ್.ಸಿ ರಾಣೇಬೆನ್ನೂರ ಇವರ ಸಮ್ಮುಖದಲ್ಲಿ ಶ್ರೀ ಎನ್.ವಿ.ಚಪ್ಪರದ, ವಕೀಲರು, ವಾದಿಯರ ಪರವಾಗಿ ಹಾಗೂ ಶ್ರೀ ಎಮ್.ಚನ್ನಬಸಪ್ಪ, ವಕೀಲರು, ಪ್ರತಿವಾದಿ 4 ನೇದ್ದವರ ಪರವಾಗಿ, ಹಾಗೂ ಪ್ರತಿವಾದಿಯರು 1 ರಿಂದ 3, 5 ರಿಂದ 7 ನೇದ್ದವರು ಏಕತರ್ಫಿ ಇದ್ದು. ಡಿಕ್ರಿ ಮಾಡಿ ಫರ್ಮಾಯಿಸುವುದೇನೆಂದರೆ

## ORDER

Suit of the plaintiff is partly decreed, with cost.

Plaintiff is entitled for 1/4th share in 6 acres 6 guntas of land in the suit schedule property.

Defendant Nos.1 to 3 are entitled for 1\4th share each in 6 acres 6 guntas of land in the suit schedule property.

ಈ ದಿವಸ ನನ್ನ ಸಹಿ ವ ಕೋರ್ಟ ಮೊಹರಿನೊಡನೆ ದಿನಾಂಕ 03 ನೇ ಜುಲೈ 2018 ರಂದು ನೀಡಲ್ಪಟ್ಟಿತು.

12/7/18

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರ

ದಾವಾ ಶೆಡ್ಯೂಲ್ "ಬಿ" ಆಸ್ತಿಗಳ ವರ್ಣನೆ

ರಾಣೇಬೆನ್ನೂರ ತಾಲ್ಲೂಕ ಬೇಲೂರ ಗ್ರಾಮದ ಹದ್ದಿಗಿರತಕ್ಕ ಜಮೀನು ರಿ.ಸ.ನಂ. 152/2 ಕ್ಷೇತ್ರ 8 ಎಕರೆ 31 ಗುಂಟೆನೇ, ಜಮೀನಿದ್ದು ಸದರ ಜಮೀನಿನಲ್ಲಿ ವಾದಿಗೆ ಕಾಯ್ದೇಸಿರ ¼ ಹಕ್ಕು ಇದ್ದು ಸದರ ಆಸ್ತಿಯ ಒಟ್ಟು ಚೆಕಬಂದಿ ಈ ಕೆಳಗಿನಂತಿರುತ್ತದೆ.

ಪೂರ್ವಕ್ಕೆ – ತುಂಗಭದ್ರಾ ಹೊಳೆ

ಪಶ್ಚಿಮಕ್ಕೆ – ಮುದ್ದೇಪ್ಪ ಪೂಜಾರ ಇವರ ಜಮೀನು

ಉತ್ತರಕ್ಕೆ – ತುಂಗಭದ್ರಾ ಹೊಳೆ

ದಕ್ಷಿಣಕ್ಕೆ – ಸಣ್ಣಹಾಲಪ್ಪ. ಭೀಮಪ್ಪ.ಕಾಳಿ ಇವರ ಜಮೀನು

ಈ ಚೆಕಬಂದಿ ಮದ್ಯದಲ್ಲಿರುವ ಪೂರಾ ಆಸ್ತಿಯು ದಾವಾಸ್ತಿ ಇರುತ್ತದೆ. ಸದರ ಆಸ್ತಿಯ ಅಜಮಾಸು ಮಾರುಕಟ್ಟೆ ಕಿಮ್ಮತ್ತು 8,000,00/- ರೂ ಆಗುತ್ತಿದ್ದು ಅದರಲ್ಲಿ ವಾದಿಯ 1/4 ಅಂಶದ ಹಿಸ್ಸಾದ ಕಿಮ್ಮತ್ತು 2,000,00/-ರೂ ಆಗುತ್ತದೆ. ಸದರ ಆಸ್ತಿಯು ವಾದಿ ಹಾಗೂ 1 ರಿಂದ 3 ನೇ ಪ್ರತಿವಾದಿಯರ ಏಕತ್ರ ಘರಾಣೇದ ಆಸ್ತಿ ಇರುತ್ತದೆ.

<u>ದಾವಾದ ಖರ್ಚು ವೆಚ್ಚಗಳ ವಿವರ</u>

| ಅ ನಂ. | ವಿವರಗಳು | ವಾದಿಯರು | ಪ್ರ.ನಂ.1 ರಿಂದ 3, 5 ರಿಂದ 7 ಏಕತರ್ಫಿ | ಪ್ರತಿವಾದಿ ನಂ.4 |
|---|---|---|---|---|
| 1 | ದಾವಾದ ಮೇಲಿನ ಕೋರ್ಟ್ ಫೀ | 15-00 | – | |
| 2 | ವಕಾಲತು – ಸದರ– | - | – | |
| 3 | ಮಧ್ಯಂತರ ಅರ್ಜಿ – ಸದರ – | - | – | |
| 4 | ಪ್ರೋಸಸ್ ಫೀ | 60-00 | – | |
| 5 | ವಕೀಲರ ಫೀ | - | – | |
| | ಒಟ್ಟು | 75-00 | – | |

ಕರಡು ಡಿಕ್ರಿ ಪ್ರಚುರ ಪಡಿಸಿದ ದಿನಾಂಕ : 09-07-2018

ಡಿಕ್ರಿ ಸಹಿಯಾದ ದಿನಾಂಕ : 12-07-2018

12/7/18

ಡಿಕ್ರಿ ಬರಹಗಾರರು ಶಿರಸ್ತೇದಾರರು ಪ್ರಧಾನ ದಿವಾಣಿ ನ್ಯಾಯಾಧೀಶರು

ರಾಣೇಬೆನ್ನೂರ